(ಇಂದು ದಿನಾಂಕಃ 19-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು ಶ್ರೀ ವಿ.ವಿ.ಸಿ ಎದುರುದಾರ ಪರ ವಕೀಲರಿಂದಃ**

1. ಮೃತ ಶಿರಾಜ್ಯುದಿನ ನನ್ನ ಗಂಡ. ಹಬೀಬ ಪಟೇಲ ನನ್ನ ಮಗ. ನನಗೆ ಮೂರು ಜನ ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಒಬ್ಬನು ಗಂಡು ಮಗ ಇರುತ್ತಾನೆ. ಇಬ್ಬರು ಹೆಣ್ಣುಮಕ್ಕಳ ಮದುವೆ ಆಗಿರುತ್ತದೆ. ನನ್ನ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಮಗ ನೌಕರಿ ಮಾಡುತ್ತಿದ್ದಾನೆ. ನನ್ನ ಗಂಡನ ಕಛೇರಿಯಲ್ಲಿ

ಅನುಕಂಪದ ಆಧಾರದ ಮೇಲೆ ನನ್ನ ಮಗನಿಗೆ ನೌಕರಿ ಬಂದಿದೆ. ನನ್ನ ಮಗನಿಗೆ ರೂ.25 ಸಾವಿರ ಸಂಬಳ ಬರುತ್ತಿದೆ. ನನಗೆ 25 ಸಾವಿರ ನನ್ನ ಗಂಡನ ಪೆನಷನ ಬರುತ್ತಿದೆ. ಅಪಘಾತ 28-11-2021 ರಂದು ಆಗಿದೆ. ಅಪಘಾತವಾದ ದಿನದಂದು ನನ್ನ ಗಂಡ ಚಂದಾಪೂರಗೆ ಹಣ ಕೊಡಲು ಹೋಗುತ್ತಿದ್ದರು. ನನ್ನ ಗಂಡ ಸ್ಕುಟಿಮೇಲೆ ಹೋಗುತ್ತಿದ್ದರು. ಸ್ಕುಟಿ ನನ್ನ ಗಂಡನ ಹೆಸರಿನಲ್ಲಿತ್ತು. ನನ್ನ ಗಂಡ ಗಾಡಿ ನಡೆಸುತ್ತಿದ್ದರು. ನನ್ನ ಗಂಡನ ಚಾಲನಾ ಪರವಾನಿಗೆ, ಅವರ ಪರ್ಸ್ ಅಪಘಾತದ ಸ್ಥಳದಲ್ಲಿ ಕಳೆದು ಹೋಗಿದೆ ಅದನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಅಪಘಾತದ ಸ್ಥಳವನ್ನು ನಾನು ನೋಡಿರುವುದಿಲ್ಲ. ಅಪಘಾತದ ಬಗ್ಗೆ ನನಗೆ ಜಮೀರ ಪಟೇಲ ಎಂಬುವವರು ಹೇಳಿರುತ್ತಾರೆ. ಅಪಘಾತ ಸಂಜೆ 07:30 ಗಂಟೆಗೆ ಆಗಿದೆ ಎಂದರೆ ಸರಿ. ಅಪಘಾತದ ಬಗ್ಗೆ ನನಗೆ ಫೋನ ಬಂದನಂತರ ನನ್ನ ಮಗ ಮತ್ತು ನನ್ನ ಮೈದುನ ಅಪಘಾತದ ಸ್ಥಳಕ್ಕೆ ಹೋಗಿರುತ್ತಾರೆ. ನನ ಮಗ ಅಪಘಾತದ ಸ್ಥಳಕ್ಕೆ ಹೋದ ನಂತರ ಅಲ್ಲಿ ನೋಡಿ ನನಗೆ ಅಪಘಾತದ ಬಗ್ಗೆ ಹೇಳಿರುತ್ತಾನೆ. ಯಾವ ಯಾವ ವಾಹನಗಳ ನಡುವೆ ಅಪಘಾತ ಆಗಿದೆ ಎಂದು ನನ್ನ ಮಗ ನನಗೆ ಹೇಳಿರುತ್ತಾನೆ. ಟ್ರ್ಯಾಕಟರ ವಾಹನ ಅತಿ ವೇಗವಾಗಿ ಹೋಗುತ್ತಿದ್ದು, ಅದರ ಹಿಂದೆ ನನ್ನ ಗಂಡ ಹೋಗುತ್ತಿದ್ದರು, ಟ್ರ್ಯಾಕಟರ ಚಾಲಕನು ಏಕಾ ಏಕಿ ಬ್ರೆಕ ಹಾಕಿದ್ದರಿಂದ ನನ್ನ ಗಂಡ ಹೋಗಿ ಟ್ರ್ಯಾಕಟರಗೆ ಗುದ್ದಿ ಅಪಘಾತ ಆಗಿದೆ ಎಂದು ನನ್ನ ಮಗ ನನಗೆ ತಿಳಿಸಿದ್ದಾನೆ. ಟ್ರ್ಯಾಕಟರ ನಾಲ್ಕು ಕಡೆಯಿಂದ ಬೊರವೆಲ ರಿಪೇರಿ ಮಾಡುವ ಹೊಂದಿತ್ತು ಎಂದರೆ ಸಾಕ್ಷಿ ಟ್ರ್ಯಾಕಟರ ಜೊತೆ ಗಿಡವನ್ನು ನೆಡುವ ಉಪಕರಣ ಅದರ ಜೊತೆಗೆ ಇತ್ತು ಎಂದು ನನ್ನ ಮಗ ನನಗೆ ಹೇಳಿದ್ದಾನೆ ಎಂದು ನುಡಿಯುತ್ತಾರೆ. ನನ್ನ ಗಂಡ ಹೋಗಿ ಟ್ರ್ಯಾಕಟರಗೆ ಗುದ್ದಿ ಅಪಘಾತ ಆಗಿದೆ ಎಂದರೆ ಸಾಕ್ಷಿಯು ಟ್ರ್ಯಾಕಟರ ವಾಹನ ಅತಿ ವೇಗವಾಗಿ ಹೋಗುತ್ತಿದ್ದು, ಅದರ ಹಿಂದೆ ನನ್ನ ಗಂಡ ಹೋಗುತ್ತಿದ್ದರು, ಟ್ರ್ಯಾಕಟರ ಚಾಲಕನು ಏಕಾ ಏಕಿ ಬ್ರೆಕ ಹಾಕಿದ್ದರಿಂದ ನನ್ನ ಗಂಡ ಹೋಗಿ ಟ್ರ್ಯಾಕಟರಗೆ ಗುದ್ದಿ ಅಪಘಾತ ಆಗಿದೆ ಎಂದು ಹೇಳುತ್ತಾರೆ. ಬೋರವೆಲ ರಿಪೇರಿ ಮಶೀನ ಟ್ರ್ಯಾಕಟರನ ಹಿಂದಿನ ಬದಿ ಇತ್ತು ಎಂದರೆ ಸರಿ. ನನ್ನ ಗಂಡ ಟ್ರ್ಯಾಕಟರನ ಹಿಂದಿನ ಮಶೀನಿಗೆ ಡಿಕ್ಕಿಪಡಿಸಿದ್ದರು ಎಂದರೆ ಸರಿ. ಅಪಘಾತ ಸ್ಥಳದ ಅಕ್ಕ ಪಕ್ಕದಲ್ಲಿ ಯಾವುದೇ ಮನೆ ಅಥವಾ ಹೋಟೆಲ ಇಲ್ಲ ಎಂದರೆ ಸರಿ. 30 ಅಡಿ ಅಗಲ ಇರುವ ರಸ್ತೆಯಲ್ಲಿ ಎದುರುಗಡೆ ಯಿಂದ ಬರುವ ವಾಹನಗಳು ಕಾಣಿಸುತ್ತವೆ ಎಂದರೆ ಸರಿ. ಟ್ರ್ಯಾಕಟರ ಚಾಲನಕನ ವೇಗ ಎಷ್ಟು ಇತ್ತು

ಅಷ್ಟೆ ವೇಗದಿಂದ ನನ್ನ ಗಂಡ ಹೋಗುತ್ತಿದ್ದರು ಎಂದರೆ ಸಾಕ್ಷಿ ಟ್ರ್ಯಾಕಟರ ಚಾಲಕನು ವೇಗವಾಗಿ ಹೋಗುತ್ತಿದ್ದು ಅದರ ಹಿಂದೆ ನನ್ನ ಗಂಡ ಹೋಗುತ್ತಿದ್ದು ಟ್ರ್ಯಾಕಟರ ಚಾಲಕನು ಏಕಾ ಏಕಿ ಬ್ರೆಕ ಹಾಕಿದ್ದರಿಂದ ನನ್ನ ಗಂಡ ಹೋಗಿ ಟ್ರ್ಯಾಕಟರಗೆ ಗುದ್ದಿ ಅಪಘಾತ ಆಗಿದೆ ಎಂದು ಹೇಳುತ್ತಾರೆ. ನನ್ನ ಗಂಡ ಬೋರವೆಲ ರಿಪೇರಿ ಮಶೀನಗೆ ಡಿಕ್ಕಿ ಪಡಿಸಿಕೊಂಡು ಅಪಘಾತ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಟ್ರ್ಯಾಕಟರ ಚಾಲಕನು ವೇಗವಾಗಿ ಹೋಗುತ್ತಿದ್ದು ಅದರ ಹಿಂದೆ ನನ್ನ ಗಂಡ ಹೋಗುತ್ತಿದ್ದು ಟ್ರ್ಯಾಕಟರ ಚಾಲಕನು ಏಕಾ ಏಕಿ ಬ್ರೆಕ ಹಾಕಿದ್ದರಿಂದ ನನ್ನ ಗಂಡ ಹೋಗಿ ಟ್ರ್ಯಾಕಟರಗೆ ಗುದ್ದಿ ಅಪಘಾತ ಆಗಿದೆ ಎಂದು ಹೇಳುತ್ತಾರೆ. ಈ ಅಪಘಾತದಲ್ಲಿ ಟ್ರ್ಯಾಕಟರ ಚಾಲಕನ ತಪ್ಪು ಎಷ್ಟು ಇದೆಯೊ ಅಷ್ಟೆ ತಪ್ಪು ನನ್ನ ಗಂಡನದು ಇದೆ ಎಂದರೆ ಸರಿಯಲ್ಲ. ನನ್ನ ಗಂಡನ ಹತ್ತಿರ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಅದು ಕಳೆದು ಹೋಗಿದೆ ಅದು ಸಿಕ್ಕರೆ ಸಲ್ಲಿಸುತ್ತೇನೆ ಎಂದು ಹೇಳುತ್ತಾರೆ. ಟ್ರ್ಯಾಕಟರ ಚಾಲಕನು ಬೋರವೆಲ ರಿಪೇರಿ ಮಶೀನನ್ನು ಯಾವುದೇ ಪರವಾನಿಗೆ ಇಲ್ಲದೆ ಅಳವಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಪಡಿಸಿದ ವಾಹನವನ್ನು ನಾನು ನೋಡಿರುತ್ತೇನೆ. ಆ ವಾಹನ ಹೇಗೆ ಇತ್ತು ಎಂದು ನನಗೆ ನೆನಪಿಲ್ಲ. ಎರಡು ವಾಹನಗಳ ಫೋಟೊತೆಗೆದು ಪೋಲಿಸರಿಗೆ ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ನನ್ನ ಮಗ ಕ್ರಿಮೀನಲ ಪ್ರಕರಣದಲ್ಲಿ ಸಾಕ್ಷ ನುಡಿದಿರುತ್ತೇವೆ. ಆ ಕ್ರಿಮೀನಲ ದಾವೆಯಲ್ಲಿ ಎರಡು ವಾಹನಗಳ ಫೋಟೊಗಳು ನನಗೆ ತೋರಿಸಿರುತ್ತಾರೆ. ನಾನು ಹಾಗೂ ನನ್ನ ಮಗ ಕ್ರಿಮೀನಲ ಪ್ರಕರಣದಲ್ಲಿ ಸಾಕ್ಷ ನುಡಿದಿದ್ದು ಅದರ ಪ್ರತಿಯನ್ನು ನ್ಯಾಯಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿದ್ದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿದ್ದರು ಸಹ ಪೋಲಿಸರು ಟ್ರ್ಯಾಕಟರ ಚಾಲಕನ ವಿರುದ್ದ ಸುಳ್ಳು ದೋಷಾರೋಪಣೆ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

2. ನನ್ನ ಗಂಡನಿಗೆ 55 ವರ್ಷ ಆಗಿತ್ತು. ನಾನು ಸಲ್ಲಿಸಿದ ಗುರುತಿನ ಚೀಟಿಯಲ್ಲಿ ನನ್ನ ಗಂಡನ ಜನ್ಮದಿನಾಂಕ 01-10-1966 ಇದೆ ಎಂದರೆ ಸರಿ. ಸದರಿ ಅಪಘಾತ ನವೆಂಬರ ತಿಂಗಳಲ್ಲಿ ಆಗಿದೆ ಎಂದರೆ ಸರಿ. ಅಪಘಾತ ಸಮಯದಲ್ಲಿ ನನ್ನ ಗಂಡನ ವಯಸ್ಸು 56 ವರ್ಷ

ಇತ್ತು ಎಂದರೆ ಸಾಕ್ಷಿ ಹೆಚ್ಚು ಕಮ್ಮಿ ಆಗಿರಬಹುದು ಎಂದು ಹೇಳುತ್ತಾರೆ. ನನ್ನ ಗಂಡನಿಗೆ ರೂ.70 ಸಾವಿರ ಸಂಬಳ ಬರುತ್ತಿತ್ತು. ನಾನು ಸಲ್ಲಿಸಿದ ವೇತನಾ ಪ್ರಮಾಣ ಪತ್ರದ ಪ್ರಕಾರ ನನ್ನ ಗಂಡನ ಸಂಬಳ ರೂ.50,150/- ಇತ್ತು ಎಂದರೆ ಸಾಕ್ಷಿ ಎಲ್ಲಾ ಕಳೆದು ಅಷ್ಟು ಬರುತ್ತಿತ್ತು ಎಂದು ಹೇಳುತ್ತಾರೆ. ಒಟ್ಟು ಸಂಬಂಳ ರೂ.65,690/- ಇತ್ತು ಎಂದರೆ ಸರಿ. ನನ್ನ ಗಂಡನಿಗೆ ಇದ್ದ ಸಂಬಳದ ಅರ್ಧ ಪಿಂಚಣಿಯಾಗಿ ಬರುತ್ತಿದೆ ಎಂದರೆ ಸರಿ. ನನ್ನ ಗಂಡನಿಗೆ ಇನ್ನು 4 ವರ್ಷ ಕೆಲಸದ ಅವಧಿ ಇತ್ತು ಎಂದರೆ ಸರಿ. ನನ್ನ ಗಂಡನಿಗೆ ರೂ.90,000/- ಸಂಬಳ ಬರುತ್ತಿತ್ತು ಎಂದರೆ ಸಾಕ್ಷಿ ನನಗೆ ಸರಿಯಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮಗ ವಿದ್ಯಾರ್ಥಿಯಾಗಿ ಅವನು ಸ್ವಂತ ದುಡಿಯುತ್ತಿದ್ದಾನೆ ಎಂದರೆ ಸಾಕ್ಷಿ ಅವನು ವಿದ್ಯಾಭ್ಯಾಸ ಮಾಡುತ್ತಿದ್ದಾನೆ ಮತ್ತು ಕೆಲಸ ಮಾಡುತ್ತಿದ್ದಾನೆ ಎಂದು ಹೇಳುತ್ತಾರೆ. ನಾನು ಒಬ್ಬಳೆ ಗಂಡನ ಮೇಲೆ ಅವಲಂಬಿತನಾಗಿದ್ದೆ, ನನ್ನ ಮಗ ಅವಲಂಬಿತನಾಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಳ್ಳುವ ಮೊದಲು ನನ್ನ ಮಗ ವಿದ್ಯಾರ್ಥಿಯಾಗಿದ್ದನು ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರವಿಲ್ಲಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.